ಸಾಕ್ಷಿಯನ್ನು ದಿನಾಂಕಃ-19.06.2023 ರಂದು  ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

**<u>ಮುಂದುವರಿದ ಪಾಟೀಸವಾಲುಃ- ಆರೋಪಿತರ  ಪರ ವಕೀಲರಿಂದ ಃ-</u>**

1. ಕಳೆದ ಪಾಟೀ ಸವಾಲಿನಲ್ಲಿ ನಾನು ನನ್ನ ಆಟೋದ ರಿಜಿಸ್ಟ್ರೇಶನ್ ಸಂಖ್ಯೆ ಹೇಳಿರುತ್ತೇನೆ. ಅದರ ರಿಜಿಸೆಟ್ರೇಶನ್ ಸಂಖ್ಯೆ ಕೆಎ **09** ಎ **7691** ಆಗಿರುತ್ತದೆ. ಸದರಿ ಆಟೋವನ್ನು ನಾನು **2009** ರಲ್ಲಿ ತೆಗೆದುಕೊಂಡಿದ್ದೆ. ಸದರಿ ಆಟೋವನ್ನು **2013** ರಲ್ಲಿ ಮಾರಾಟ ಮಾಡಿರುವುದರಿಂದ ಅದರ ದಾಖಲೆಗಳನ್ನು ಹಾಜರುಪಡಿಸಲಾಗುವುದಿಲ್ಲ. ಮಾರಾಟ ಮಾಡುವ ಸಂದರ್ಭದಲ್ಲಿ ಬರೆಸಿಕೊಂಡಿದ್ದ ಡೆಲವರಿ ನೋಟನ್ನು ಹಾಜರುಪಡಿಸಿರುವುದಿಲ್ಲ. ಅದು ಕಳೆದುಹೋಗಿರುವುದರಿಂದ ಅದನ್ನು ಹಾಜರುಪಡಿಸಲು ತೊಂದರೆ ಇದೆ. ಸದರಿ ಆಟೋ ಗೂಡ್ಸ್ ಆಟೊ ಆಗಿತ್ತು. ನಾನು ಆಟೋ ಚಾಲಕನಾಗಿದ್ದು ನನ್ನ ಬಳಿ ಗೂಡ್ಸ್ ಆಟೊ ಇತ್ತೆಂದು ನನ್ನ ದೂರಿನಲ್ಲಿ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಉದ್ಯೋಗದ ಕಲಂನಲ್ಲಿ  ತಿಳಿಸಿರುವುದಿಲ್ಲ. ಅದನ್ನು ತಿಳಿಸದೆ ಇರಲು ತೊಂದರೆ ಇತ್ತು ಏಕಂದರೆ ನಾನು ಆಟೋವನ್ನು ಮಾರಾಟ ಮಾಡಿ ವ್ಯವಸಾಯ ಮಾಡುತ್ತಿದ್ದೆ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲದೆ ಇದ್ದರು ಕೂಡ ವ್ಯವಸಾಯ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಜಮೀನು ನನ್ನ ತಾಯಿ ಮತ್ತು ನನ್ನ ಅಜ್ಜಿಯ ಹೆಸರಿನಲ್ಲಿ ಇತ್ತು ಎಂದು ನುಡಿದಿದ್ದಾರೆ. ನಾನು ವ್ಯವಸಾಯ ಮಾಡುತ್ತಿದ್ದೆ

ಎನ್ನುವ ನನ್ನ ಅಜ್ಜಿ ಮತ್ತು ತಾಯಿ ಹೆಸರಿಲ್ಲಿರುವ ಆಸ್ತಿಯ ವಿವರಗಳನ್ನು ನನ್ನಪಿರ್ಯಾದು ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ. ಸದರಿ ವಿಚಾರವನ್ನು ಹೇಳಿ ಬರಿಸಲು ನನಗೆ ಏನು ತೊಂದರೆ ಇರಲಿಲ್ಲ ಎಂದರೆ ಸರಿ.

2. ನನ್ನ ಪಿರ್ಯಾದಿನಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆರೋಪಿ ಇಂಗ್ಲಿಷ್ ಬೆರಳಚ್ಚುಗಾರರಾಗಿರುತ್ತಾರೆಂದು ಬರೆಸಿರುತ್ತೇನೆ. ಸಾಕ್ಷಿಗೆ ಪಿರ್ಯಾದಿಯ ಕಾಸ್ ಟೈಟಲಿಲ್ಲಿ ಆರೋಪಿಯ ವಿಳಾಸ ತೋರಿಸಲಾಗಿ ಅದರಲ್ಲಿ ಆರೋಪಿ ಇಂಗ್ಲಿಷ ಬೆರಳಚ್ಚು ಗಾರರು ಎಂದು ಬರೆದಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ನನ್ನ ವಕೀಲರು ಕಾರ್ಯ ನಿರ್ವಾಹಕ ಅಧಿಕಾರಿಗಳು ಮಲೈ ಮಹದೇಶ್ವರ ದೇವಸ್ಥಾನಕ್ಕೆ ದಿಃ **25.10.2013** ರಂದು ಒಂದು ಪತ್ರವನ್ನು ನೀಡಿದ್ದರು ಎಂದರೆ ಸರಿ. ಸದರಿ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಆ ಪತ್ರದಲ್ಲಿ ನನ್ನ ಹೆಸರು ಅಥವಾ ನನ್ನ ಸಹಿ ಇಲ್ಲ ಎಂದರೆ ಸಾಕ್ಷಿ ಅದನ್ನು ನೋಡಿ ಅದರಲ್ಲಿ ತನ್ನ ಸಹಿ ಹೆಸರು ಇಲ್ಲ ಎಂದು ಒಪ್ಪಿಕೊಂಡಿರುವುದರಿಂದ ಸದರಿ ದಾಖಲೆಯನ್ನು ನಿಡಿ **2** ಎಂದು ಗುರುತಿಸಲಾಯಿತು. ದಿಃ **19.8.2013** ರಂದು ಆರೋಪಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು , ಮಾದೇಶ್ವರ ಬೆಟ್ಟ ಬ್ರಾಂಚ್ ಗೆ ತನ್ನ ಯಾವುದೆ ಚೆಕ್ಕನ್ನು ಹಾನರ್ ಮಾಡಬೇಡಿ ಎಂದು ಒಂದು ಪತ್ರವನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿವಿಚಾರ ಗೊತ್ತಾದ ಮೇಲೆ ಆರೋಪಿಯನ್ನು ಹೆದರಿಸುವುದಕ್ಕೋಸ್ಕರ ನಮ್ಮ ವಕೀಲರು ನಿಡಿ **2** ಪತ್ರವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನಂತರ ಆರೋಪಿ , ನನ್ನ ಅಣ್ಣ ನಾಗರಾಜು ಮತ್ತು ನಾನು ಕೊಡುತ್ತಿರುವ ಕಿರುಕುಳವನ್ನು ತಡೆದುಕೊಳ್ಳಲು ಆಗುತ್ತಿಲ್ಲ ಎಂದು ದಯಾಮರಣ ಕೋರಿ ಮಲೆಮಹದೇಶ್ವರ ಬೆಟ್ಟದ ಇಓ, ಜಿಲ್ಲಾಧಿಕಾರಿ , ಸೆಕ್ರೆಟರಿ , ರವರಿಗೆ ಪತ್ರ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ವಾರ್ತಾ ಪತ್ರಿಕೆಯಲ್ಲಿ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ಗೊತ್ತಾಗಿ ನಾನು , ನನ್ನ ಅಣ್ಣ ಆರೋಪಿಯ ಬಳಿ , ಹೋಗಿ ಅರೋಪಿಯ ವಿರುದ್ದ ಇರುವ ಎಲ್ಲ ಪ್ರಕರಣಗಳನ್ನು ಹಿಂದಕ್ಕೆ ಪಡೆಯುತ್ತೇವೆ ಎಂದು ತಿಳಿಸಿ ಅವರಿಂದ ಒಂದು ಖಾಲಿ ಹಾಳೆಯ ಮೇಲೆ ಸಹಿಯನ್ನು ಪಡೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ದೇವಸ್ಥಾನದ ಸಿಬ್ಬಂದಿಗಳು ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಆರೋಪಿ ನನ್ನ ಅಣ್ಣನ ಬಳಿ ಹಲವಾರು ಬಾರಿ ವಿಚಾರಿಸಿ ಪ್ರಕರಣಗಳನ್ನು ಹಿಂದಕ್ಕೆ ಪಡೆದಿರುವ ಬಗ್ಗೆ ದಾಖಲೆ ಕೊಡಿ ಎಂದು ಕೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಅಲ್ಲಿ ದೇವಸ್ಥಾನದ ಆಡಳಿತ ಕಛೇರಿ

ಸಿಬ್ಬಂದಿವರ್ಗದವರೆಲ್ಲ ಸೇರಿ ಆರೋಪಿಗೆ ನನ್ನ ಅಣ್ಣನ ವಿರುದ್ದ ದೂರು ಕೊಡಿ ಎಂದು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

3. ಬಿಳಿಗಿರಿ ಎಕ್ಸಪ್ರೆಸ್ ಎಂದು ಒಂದು ವಾರ್ತಾ ಪತ್ರಿಕೆ ಪ್ರಕಟ ಆಗುತ್ತದೆಂದರೆ ನನಗೆಗ ೊತ್ತಿಲ್ಲ. ಸಾಕ್ಷಿಗೆ ದಿಃ **31.3.2019** ರ ಬಿಳಿಗಿರಿ ಎಕ್ಸಪ್ರೆಸ್ ಎಂಬ ಕನ್ನಡ ವಾರ್ತಾ ಪತ್ರಿಕೆಯುನ್ನು ತೋರಿಸಲಾಗಿ ಸಾಕ್ಷಿ ನೋಡಿ ಅದರಲ್ಲಿರುವ ಬರೆದಿರುವ ' ಮಹದೇಶ್ವರ ಬೆಟ್ಟ ದೇಗುಲ ಕಛೇರಿಯಲ್ಲಿ ಬಡ್ಡಿ ದಂದೆ ನಾಗರಾಜು ಹೆಸರು ಮುಂಚೂಣಿ? ' ಎಂದು ಬರೆದಿರುತ್ತದೆ ಮತ್ತು ಅದರಲ್ಲಿ ಬಲಭಾಗದಲ್ಲಿ ಇರುವ ಮೊದಲನೆ ಪೊಟೊ ನನ್ನ ಅಣ್ಣನ ಫೊಟೂ ಎಂದು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಸದರಿ ಪತ್ರಿಕೆಯನ್ನು ನಿಡಿ **3** ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಪಟ್ಟಂತೆ **8** ಜನ ಸಿಬ್ಬಂದಿಯವರು ಮುಖ್ಯಮಂತ್ರಿಯವರಿಗೆ ದೂರನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಇವತ್ತಿಗು ಕೂಡ ನಾನು **,** ನನ್ನ ಅಣ್ಣ ಇಬ್ಬರು ಚೆನ್ನಾಗಿ ಮಾತನಾಡುತೇವೆ. ಸಾಕ್ಷಿಗೆ ಎಂ ಎಂ ಹಿಲ್ಸ್ ಪೊಲಿಸ್ ಠಾಣೆಯ ಪ್ರಕರಣ ಸಂಖ್ಯೆ **6/22** ರ ಎಫ್ ಐ ಆರ್ ಅನ್ನು ತೋರಿಸಲಾಗಿ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆದರೆ ಅದರಲ್ಲಿ ಕಾಣಿಸಿರುವ ಆರೋಪಿಯ ಹೆಸರು ನಾಗರಾಜು ಮತ್ತು ವಿಳಾಸ ನನ್ನ ಅಣ್ಣನದ್ದೆ ಎಂದು ನೋಡಿ ಒಪ್ಪಿಕೊಂಡಿರುತ್ತಾರೆ. ನನಗೆ ಎಲ್ಲ ವಿಚಾರ ಗೊತ್ತಿದ್ದರು ಕೂಡ ನನ್ನ ಅಣ್ಣನಿಗೆ ಸಹಾಯಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗು ಮತ್ತು ನಿಪಿ **1** ಚಿಕ್ಕಿಗು ಯಾವುದೆ ಸಂಬಂಧ ಇಲ್ಲದೆ ಇದ್ದರು ಕೂಡ ನನ್ನ ಅಣ್ಣನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಹಿಳೆಯಾಗಿದ್ದರಿಂದ ಹೇಗಾದರು ಮಾಡಿ ಅವರಿಂದ ಹಣ ವಸೂಲಿ ಮಾಡಬೇಕು ಎಂದು ಅವರ ವಿರುದ್ದ ಹಲವಾರು ದೂರುಗಳನ್ನು ನೀಡಿ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್ಸಿ

ಮಳವಳ್ಳಿ